ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 5, November-December 2023, Pp. 109-113
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ಸಾಹಿತ್ಯದಲ್ಲಿ ಆಧುನಿಕತೆಯ ಪ್ರವೇಶ

**ಮಂಜುನಾಥ್ ಹೆಚ್.ಎಂ.**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಲ್ಲಹಳ್ಳಿ
ನಂಜನಗೂಡು ತಾಲೂಕು, ಮೈಸೂರು ಜಿಲ್ಲೆ.

***Abstract:***
*ಕನ್ನಡದಲ್ಲಿ 'ನವ್ಯ' ಎಂದು ಕರೆಯಲ್ಪಡುವ ಆಧುನಿಕತೆ 1950 ರ ದಶಕದಲ್ಲಿ ಸಾಹಿತ್ಯ ಚಳುವಳಿಯಾಗಿ ಹೊರಹೊಮ್ಮಿತು. ಈ ಅವಧಿಯಲ್ಲಿ ಬರಹಗಾರರು ಉದ್ದೇಶಪೂರ್ವಕವಾಗಿ ನವೋದಯ ಕಾಲದ ಭಾವಪ್ರಧಾನತೆಯಿಂದ ದೂರ ಸರಿಯುತ್ತಿದ್ದರು. ಇದು ವಸಾಹತುಶಾಹಿ ಮತ್ತು ಪಾಶ್ಚಿಮಾತ್ಯರೊಂದಿಗಿನ ಸಂಕೀರ್ಣ ಸಂವಹನದಿಂದ ರೂಪುಗೊಂಡ ಸಾಹಿತ್ಯಿಕ ಪುನರುಜ್ಜೀವನದ ಯುಗವೆಂದು ಕರೆಯಬಹುದು. ರಾಷ್ಟ್ರೀಯ ಭಾವನೆಗಳನ್ನು ಪ್ರತಿಬಿಂಬಿಸುವ ನವೋದಯಕ್ಕೆ ವ್ಯತಿರಿಕ್ತವಾಗಿ, ನವ್ಯ ಅವಧಿಯು ಭಾರತೀಯ ರಾಷ್ಟ್ರ ರಚನೆಯ ಸಂದರ್ಭದಲ್ಲಿ ಹೊರಹೊಮ್ಮಿತು. ಕನ್ನಡದ ಪ್ರಗತಿಶೀಲ ಸಾಹಿತ್ಯಕ್ಕೆ ನವ್ಯ ಭಾಗಶಃವಾಗಿ ಕಾಣಿಸಿಕೊಂಡಿತು ಇವು ಪ್ರಗತಿಶೀಲ ಸಾಹಿತ್ಯಕ್ಕೆ ಪ್ರತಿಕ್ರಿಯೆಯಾಗಿ ಹೊರಹೊಮ್ಮಿದವು. ಪ್ರಸ್ತುತ ಲೇಖನದಲ್ಲಿ ಕನ್ನಡ ಸಾಹಿತ್ಯಕ್ಕೆ ಆಧುನಿಕ ಪ್ರವೇಶಿಕೆಯನ್ನು ಕುರಿತು ವಿಶ್ಲೇಷಿಸಲಾಗಿದೆ.*

***Keywords:*** *ಕನ್ನಡ ಸಾಹಿತ್ಯ, ನವ್ಯ ಸಾಹಿತ್ಯ, ಆಧುನಿಕತೆ, ಕನ್ನಡ ಕಾದಂಬರಿಗಳು.*

**ಪೀಠಿಕೆ**

ಸ್ವಾತಂತ್ರ್ಯ ಪೂರ್ವದ ಭಾರತದಲ್ಲಿ ಆಧುನಿಕತೆ ಇನ್ನೂ ಶೈಶವಾವಸ್ಥೆಯಲ್ಲಿ ಇದ್ದುದ್ದನ್ನು, ಅದರ ಸುಳಿವು ಎಲ್ಲೆಡೆ ಹಬ್ಬಿಕೊಂಡಿದ್ದನ್ನು ಕಾದಂಬರಿಕಾರರು ಗುರುತಿಸಿದ್ದಾರೆ. ಇಂತಹ ಆಧುನಿಕ ವಾತಾವರಣದ ಸವಿಯನ್ನು ಅನುಭವಿಸಿದ್ದ ಸುಶಿಕ್ಷಿತ ಜನ ಅದನ್ನು ಇನ್ನು ಹೆಚ್ಚಿನ ಮಟ್ಟದಲ್ಲಿ ಒಪ್ಪಿಕೊಂಡು ಸ್ವೀಕರಿಸಲು ಕಾತುರರಾಗಿ ನಿಂತಿದ್ದನ್ನು ಪ್ರಸ್ತಾಪಿಸಿದ್ದಾರೆ. ಆಂಗ್ಲ ವಿದ್ಯಾಭ್ಯಾಸವನ್ನು ಪಡೆದು ಪಾಶ್ಚಾತ್ಯ ಸಾಹಿತ್ಯವನ್ನು ಓದಿಕೊಂಡಿದ್ದರು. ಅದರಂತೆಯೇ ವಿದೇಶಿಯರ ರೊಮ್ಯಾಂಟಿಕ್ ಸಾಹಿತ್ಯವನ್ನೆಲ್ಲಾ ಓದಿಕೊಂಡು ಅದರ ಪ್ರಯೋಜನದ ಬಗ್ಗೆ ತಮ್ಮ ತಮ್ಮ ಕೃತಿಗಳ ಮೂಲಕ ಮನವರಿಕೆ ಮಾಡಿಕೊಟ್ಟರು. ಜೊತೆಗೆ ಹೊಸ ಶಿಕ್ಷಣ ನೀತಿ ಜಾರಿಗೆ ಬಂದ ಮೇಲೆ ಪ್ರತಿಯೊಬ್ಬರೂ ಓದಲಾರಂಭಿಸಿದರು. ಈ ಮನ್ವಂತರದ ಕಾಲದಲ್ಲಿ ಕಾದಂಬರಿಯಲ್ಲಿ ಹಲವಾರು ರೀತಿಗಳು ಬೆಳೆದು ಬಂದವು.[1]

ಆಧುನಿಕ ಸಾಹಿತ್ಯದ ಬರಹಗಾರನ ಕಾದಂಬರಿಗಳಲ್ಲಿ ಮನಸ್ಸು ಸ್ವತಂತ್ರವಾಗಿ ಕೆಲಸ ಮಾಡುತ್ತದೆ. ಯಾವುದೇ ಒಂದು ಧ್ಯೇಯಕ್ಕೆ ಕಟ್ಟು ಬೀಳದೆ ಸಹಜವಾದ ಹಂಬಲ, ಬದುಕಿನ ವಿಸ್ಮಯ ಮತ್ತು ಬದುಕಿನ ಎಲ್ಲಾ ಅನುಭವಗಳಿಗೆ ತನ್ನ ಚಿಂತನೆಯನ್ನು ತೆರೆದಿಟ್ಟುಕೊಳ್ಳುತ್ತದೆ. ಎಲ್ಲಾ

[1] ಶಾಂತಿನಾಥ ದೇಸಾಯಿ. *ಕನ್ನಡ ಕಾದಂಬರಿ ನಡೆದು ಬಂದ ದಾರಿ.* ಪು.ಸಂ. 24–25

***Please cite this article as:*** ಮಂಜುನಾಥ್ ಹೆಚ್.ಎಂ. (2023). ಕನ್ನಡ ಸಾಹಿತ್ಯದಲ್ಲಿ ಆಧುನಿಕತೆಯ ಪ್ರವೇಶ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 2(5), 109–113.

ನಂಬಿಕೆಗಳು ಮತ್ತು ಮೌಲ್ಯಗಳನ್ನು ಪ್ರಶ್ನಿಸುತ್ತದೆ. ಪ್ರಶ್ನೆಯ ಹಿಂದೆ ಸಿನಿಕತನವಿಲ್ಲ, ಕುಹಕವಿಲ್ಲ, ಗಂಭೀರ ಶ್ರದ್ಧೆ ಇದೆ. ತನ್ನ ಅನುಭವವನ್ನು ಮುಖ್ಯವಾಗಿ ಪರಿಗಣಿಸುತ್ತದೆ. ಇದಕ್ಕೆ ನೈತಿಕ ದೃಷ್ಟಿ ಇದ್ದರೂ, ಪೂರ್ವ ನಿರ್ಧಾರಿತ ನೈತಿಕ ಅಳತೆಗೋಲುಗಳನ್ನು ಬಳಸಿ ವರ್ತನೆಯನ್ನು ಅಳೆಯದೆ ತೀರ್ಪಿಗಿಂತ ಅರ್ಥಮಾಡಿಕೊಳ್ಳುವುದು ಅಗತ್ಯ ಎಂದು ಭಾವಿಸುತ್ತದೆ. ಮನುಷ್ಯನ ಮನಸ್ಸಿನ ವ್ಯಾಪಾರಗಳ ಜಟಿಲತೆಯನ್ನು ಗುರುತಿಸಿ, ಏಕಕಾಲದಲ್ಲಿ ದ್ವಂದ್ವಗಳ ಅಸ್ತಿತ್ವದ ಸಾಧ್ಯತೆಯನ್ನು ಗಮನಿಸಿ, ಮನುಷ್ಯನ ಸ್ವಭಾವದ ವೈವಿಧ್ಯತೆ, ವೈಚಿತ್ರಗಳನ್ನು ಗ್ರಹಿಸಲು ಯತ್ನಿಸುತ್ತದೆ. ಯಾವುದೇ ಮನುಷ್ಯನ ಸ್ವಭಾವವು ಸ್ಪಷ್ಟವಾದ, ನಿಶ್ಚಿತ ಪ್ರಮಾಣದ ಗುಣಗಳ ಮೊತ್ತ ಎಂದು ಪರಿಗಣಿಸದೆ ಮನುಷ್ಯನ ಸ್ವಭಾವ ಎಂದು ನಾವು ಒಟ್ಟಾರೆ ಪರಿಗಣಿಸಿದರೂ. ಅದರಲ್ಲೂ ಅಸ್ಥಿರತೆ ಉಂಟು, ತಳಮಳ ಉಂಟು ಎನ್ನುವುದನ್ನು ಗುರ್ತಿಸುತ್ತದೆ. ಮನುಷ್ಯನ ಚೇತನದ ವಿಕಾಸಕ್ಕೆ ಇರುವ ಹಿಂದಿನ ಯುಗಗಳು ಗುರುತಿಸದಿದ್ದ, ಬಂಧನಗಳನ್ನು ಈ ಮನೋಧರ್ಮ ಗುರುತಿಸಿ ವಿಶ್ಲೇಷಿಸುತ್ತದೆ. ಇದರಿಂದಲೇ ಮದುವೆಯಂಥ ಸಹಸ್ರಾರು ವರ್ಷಗಳಿಂದ ಪವಿತ್ರ ಎಂದು ಪರಿಗಣಿತವಾದ ಸಂಸ್ಥೆಯೂ ತೀಕ್ಷ್ಣ ವಿಶ್ಲೇಷಣೆಗೆ, ವಿಮರ್ಶೆಗೆ ಗುರಿಯಾಗುತ್ತದೆ. ಗಂಡು–ಹೆಣ್ಣೆಂಬ ಸಂಬಂಧ ವ್ಯಕ್ತಿ – ಸಮಾಜದ ಸಂಬಂಧ, ದೇವರ ಕಲ್ಪನೆ ಎಲ್ಲಾ ಕೂಲಂಕಷ ವಿಮರ್ಶೆಗೆ ಗುರಿಯಾಗುತ್ತದೆ.

ಯೂರೋಪಿನ ರಾಷ್ಟ್ರಗಳು ವಿಶ್ವ ಸಾಹಿತ್ಯಕ್ಕೆ ಹಲವು ಅತ್ಯುತ್ತಮ ಕಾದಂಬರಿಗಳನ್ನು ಕೊಟ್ಟಿದೆ. ಸ್ಪೇನಿನ–ಸರ್ವಾಂಟಿಸ್, ಜರ್ಮನಿಯ–ಗಯಟೆ, ಕಾಫ್ಕ, ಥಾಮಸ್‌ಮಾನ್; ಫ್ರಾನ್ಸ್‌ನ ವಾಲ್ಟೇರ್, ಆಲ್ಬರ್ಟ್‌ಕಾಮು ಹಾಗೂ ರಷ್ಯಾದ ಲಿಯೋ ಟಾಲ್‌ಸ್ಟಾಯ್, ದಾಸ್ತೊವಸ್ಕಿ, ಟುರ್ಗೆನೈಫ್ ಮುಂತಾದವರು ಅನೇಕ ಕಾದಂಬರಿಗಳನ್ನು ರಚಿಸಿದ್ದಾರೆ. ಇವರಲ್ಲದೆ ಡಿ.ಹೆಚ್. ಲಾರೆನ್ಸ್, ಇ.ಎಂ.ಪಾಸ್ಟರ್, ವರ್ದೇನಿಯಾ ವುಲ್ಫ್ ಇತರರು 20ನೆಯ ಶತಮಾನದ ಆಂಗ್ಲ ಕಾದಂಬರಿಕಾರರಲ್ಲಿ ಪ್ರಮುಖರಾಗಿದ್ದಾರೆ. ಭಾರತೀಯ ಸಾಹಿತ್ಯದಲ್ಲಿಯೂ ಕಾದಂಬರಿಯ ಪ್ರಕಾರ ಜನಪ್ರಿಯವಾಗಿದೆ. ಹಿಂದಿಯಲ್ಲಿ ಪ್ರೇಮ್‌ಚಂದ್, ಬಂಗಾಳದಲ್ಲಿ ಬಂಕಿಮಚಂದ್ರ ಚಟರ್ಜಿ, ಮಲಯಾಳಂನಲ್ಲಿ ತಕಳಿ ಶಿವಶಂಕರ್ ಪಿಳ್ಳೆ ಹಾಗೂ ರಾಜಾರಾಮ್ ಆರ್.ಕೆ., ಹರಮಾಳಗಾಂವಕರ್ ಪ್ರಸಿದ್ಧ ಭಾರತೀಯ ಕಾದಂಬರಿಕಾರರಾಗಿದ್ದಾರೆ.[2]

ಕನ್ನಡ ಕಾದಂಬರಿಗಳ ಕ್ಷೇತ್ರ ಬಹಳ ವಿಪುಲವಾಗಿ ಬೆಳೆದಿದೆ. ಮೊದಲ ಕನ್ನಡ ಕಾದಂಬರಿ ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ' ಆನಂತರದ ದಿನಗಳಲ್ಲಿ ಬಂಗಾಳಿ ಮತ್ತು ಮರಾಠಿ ಭಾಷೆಗಳ ಪ್ರಭಾವದಿಂದ ಕಾದಂಬರಿ ಪ್ರಕಾರ ರೂಪಾಂತರ ಹೊಂದಿ ಕನ್ನಡಕ್ಕೆ ಬಂದು ಸಮೃದ್ಧವಾಗಿ ಬೆಳೆಯಿತು. ಎಂ.ಎಸ್.ಪುಟ್ಟಣ್ಣರ 'ಮಾಡಿದ್ದುಣ್ಣೋ ಮಹಾರಾಯ' ಕನ್ನಡದ ಮೊಟ್ಟ ಮೊದಲು ಬಂದ ಗಣ್ಯ ಕಾದಂಬರಿಗಳಲ್ಲಿ ಒಂದು. ಇದು ಆಧುನಿಕ ಕನ್ನಡ ಕಾದಂಬರಿಕಾರರ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದೆ. ಅನಕೃ ಅವರ ಸಂಧ್ಯಾರಾಗ, ಕುವೆಂಪು ಅವರ ಕಾನೂರು ಹೆಗ್ಗಡಿತಿ, ಕಾರಂತರ ಮರಳಿ ಮಣ್ಣಿಗೆ, ಗೋಕಾಕರ ಸಮರಸವೇ ಜೀವನ, ಮಾಸ್ತಿಯವರ ಚೆನ್ನಬಸವನಾಯಕ, ತ.ರಾ.ಸು. ಅವರ ಹಂಸಗೀತೆ, ಬಸವರಾಜ ಕಟ್ಟೀಮನಿಯವರ ಮಾಡಿಮಡಿದವರು, ಚದುರಂಗರ ಸರ್ವಮಂಗಳ, ದೇವುಡು ಅವರ ಮಹಾಬ್ರಾಹ್ಮಣ, ರಾವ್ ಬಹದ್ದೂರರ ಗ್ರಾಮಾಯಣ, ತ್ರಿವೇಣಿಯವರ ಶರಪಂಜರ–ಮೊದಲಾದವು ಕನ್ನಡದ ಪ್ರಖ್ಯಾತ ಕಾದಂಬರಿಗಳು. ಸೀತಾರಾಮಶಾಸ್ತ್ರಿಯವರ ಐತಿಹಾಸಿಕ ಹಾಗೂ ಮ.ರಾಮಮೂರ್ತಿಯವರ ಪತ್ತೇದಾರಿ ಕಾದಂಬರಿಗಳು, ನಾ.ಕಸ್ತೂರಿ, ಬೀಚಿ, ನಾಡಿಗೇರರ ಹಾಸ್ಯ ಪ್ರಧಾನ ಕಾದಂಬರಿಗಳು ಜನಪ್ರಿಯವಾಗಿವೆ.

---

[2] ನಿರಂಜನ. (ಸಂ.) (1972). ಜ್ಞಾನಗಂಗೋತ್ರಿ ಕಿರಿಯರ ವಿಶ್ವಕೋಶ. ಪು.ಸಂ.173–74

ಸಂಸ್ಕಾರ–ಡಾ.ಯು.ಆರ್.ಅನಂತಮೂರ್ತಿ, ವಂಶವೃಕ್ಷ –ಡಾ.ಎಸ್.ಎಲ್. ಭೈರಪ್ಪ, ಗತಿ ಸ್ಥಿತಿ–ಗಿರಿ ಇವು ಏಳನೆಯ ದಶಕಗಳ ಪ್ರಮುಖ ಕಾದಂಬರಿಗಳು.[3]

ಕಾದಂಬರಿಯಲ್ಲಿ ಪಾತ್ರ ರಚನೆ, ಸನ್ನಿವೇಶ ಸೃಷ್ಟಿಗಳು ಅದರಲ್ಲಿಯೂ ವಿಶೇಷ ಕಲೆಗಾರಿಕೆಯಾದರೆ, ಪ್ರಕರಣಗಳ ಹೊಂದಿಕೆಯು ಕಾದಂಬರಿಯ ಅಂತ್ಯದಲ್ಲೂ ಸಾಮಾನ್ಯವಾಗಿ ಮೊದಲನೆಯ ಮೆಟ್ಟಿಲಾಗಿರುತ್ತದೆ. ಕಥಾನಕದ ಕಾಲ, ಕಥೆಯು ನಡೆದ ಕಾಲದ ಸೂಕ್ಷ್ಮ ವರ್ಣನೆ, ಅಲ್ಲಿಯ ಪರಿಸ್ಥಿತಿ, ಕಥೆಗೂ ಅದಕ್ಕೂ ಇರುವ ಸಂಬಂಧ, ಅವರ ಮನಸ್ಸು ಮತಗಳ ಪ್ರದರ್ಶನ, ಇವುಗಳೆಲ್ಲವುಗಳಿಂದ ಕಾದಂಬರಿಯ ಹಿನ್ನೆಲೆ ನಿರ್ಮಾಣವಾಗುತ್ತಿರುತ್ತದೆ.

ನವೋದಯ ಸಾಹಿತ್ಯದಲ್ಲಿ ಕಾದಂಬರಿಗಳು ಸಮೂಹದ ಮೇಲೆ ಹೆಚ್ಚು ಕೇಂದ್ರೀಕರಿಸಿದ್ದರೆ, ನವ್ಯದಲ್ಲಿ ವ್ಯಕ್ತಿಯ ಮೇಲೆ, ವ್ಯಕ್ತಿಯ ಅಸ್ತಿತ್ವವನ್ನು ಮನುಷ್ಯನ ಸ್ಥಿತಿಯನ್ನು ಮೂಲಭೂತ ಪ್ರಶ್ನೆಗಳು ಶೋಧನೆಗೆ ಒಳಪಡಿಸಿದವು.[4] ನವ್ಯ ಕಾದಂಬರಿಕಾರರು ಬದುಕನ್ನು ನೋಡುವ ನೆಲೆಯೇ ತೀರಾ ಭಿನ್ನವಾದುದು. ಇವರ ಆಲೋಚನೆಗನುಗುಣವಾಗಿ ಸಾಹಿತ್ಯದ ಸ್ವರೂಪ ಸಾಮಾಜಿಕವಾಯಿತು. ಅಲ್ಲದೆ ನವ್ಯ ಕಾದಂಬರಿ ವೈಯಕ್ತಿಕತೆಯತ್ತ ಸಾಗಿತು. ನವ್ಯ ಕಾದಂಬರಿ ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ಅದರ ಅಭಿವ್ಯಕ್ತಿ ಮಾರ್ಗ ಭಿನ್ನವಾಯಿತು. ವ್ಯಕ್ತಿಯೊಬ್ಬರ ಮನಸ್ಥಿತಿಯ ಮೂಲಕ ಸಾಮಾಜಿಕ ಸಮಸ್ಯೆಗಳನ್ನು ಗುರುತಿಸುವ ಪ್ರಯತ್ನವನ್ನು ನವ್ಯ ಕಾದಂಬರಿ ಮಾಡಿತು. ನವ್ಯ ಕಾಲದ ಕಾದಂಬರಿಯ ಎಲ್ಲವನ್ನು ಬರೆದಿಡುವ ಪ್ರವೃತ್ತಿಯಿಂದಾಗಿ ಸಾಂಪ್ರದಾಯಿಕ ಸಮಾಜದ ಹಲವು ಮೌಲ್ಯಗಳು ಅರ್ಥವನ್ನು ಕಳೆದುಕೊಂಡವು. ಹಿಂದೆ ಇದ್ದವರ ದೃಷ್ಟಿಯಲ್ಲಿ ಅನೈತಿಕವೆನಿಸುವ ಕೆಲವು ಸಂಬಂಧಗಳು ಇಲ್ಲಿ ಮಾನ್ಯತೆಯನ್ನು ಪಡೆದುಕೊಂಡಿತು.

ನವ್ಯ ಕಾದಂಬರಿಯ ಸಂಕೀರ್ಣ ಕಾಲಪ್ರಜ್ಞೆ ಮತ್ತು ಪ್ರಬಂಧ ಧ್ವನಿಯತ್ತ ಅದು ಕೊಡುವ ವಿಶೇಷ ಲಕ್ಷ್ಯ ಅದನ್ನು ವಾಸ್ತವ ಮಾರ್ಗದ ಕಾದಂಬರಿಗಳಿಂದ ಬೇರ್ಪಡಿಸಿ ತೋರಿಸುತ್ತವೆ. ಕಾದಂಬರಿಯ ಅಂಗಗಳಲ್ಲಿ ಒಟ್ಟಾಗಿ ದುಡಿಯಬೇಕು. ಅದರ ವಿವರಗಳೆಲ್ಲ ಭಾಷೆಯಲ್ಲಿ ನಿಜವಾಗಬೇಕು ಎಂಬ ಹೊಸ ಅರಿವನ್ನು ಪಡೆಯುವುದರ ಮೂಲಕ ಮಾಧ್ಯಮದ ಬಗ್ಗೆ ಹೊಸ ತಿಳಿಯನ್ನು ಹುಟ್ಟಿಸುವಲ್ಲಿ ನವ್ಯ ಕಾದಂಬರಿ ಯಶಸ್ಸನ್ನು ಪಡೆಯಿತು.[5]

ನವೋದಯ ಅಥವಾ ಪ್ರಗತಿಶೀಲ ಕಾಲದ ಕಾದಂಬರಿಕಾರರಾಗಿದ್ದಂತಹ ನಿಶ್ಚಿತ ಮೌಲ್ಯಗಳು ಅವುಗಳಲ್ಲಿನ ಅಚಲ ನಂಬಿಕೆ ನವ್ಯ ಕಾದಂಬರಿಕಾರನಿಗೆ ಇಲ್ಲದ ಕಾರಣ ಅನುಭವಗಳನ್ನು ಆಧರಿಸಿಯೇ ಪ್ರಜ್ಞಾಮಟ್ಟದಲ್ಲಿಯೇ ಪೀಕಲಾಟವನ್ನು ಎದುರಿಸಬೇಕಾಗುತ್ತದೆ. ತನ್ನಿಂದಲೇ ಎಲ್ಲವನ್ನು ಗುರುತಿಸಿಕೊಳ್ಳುತ್ತಾ. ತನಗೂ ಸಮಾಜಕ್ಕೂ ಇರುವ ಸಂಬಂಧವನ್ನು ಕಂಡುಕೊಳ್ಳುತ್ತಾ ವೈಯಕ್ತಿಕ ನೆಲೆಯ ಅನುಭವಗಳನ್ನು ಮೌಲ್ಯಗಳನ್ನು ಸಾರ್ವತ್ರಿಕ ಪರೀಕ್ಷೆಗೆ ಒಡ್ಡಬೇಕಾಗಿದೆ. ಹಿಂದಿನ ಕಾದಂಬರಿಕಾರರು ಅದರಲ್ಲೂ ಉದ್ಧಾರಕನ ತನ್ಮಯತೆ ಬಂದುಬಿಡುತ್ತಿತ್ತು. ಇಂತಹ ಪಾಪಗಳಲ್ಲಿ ತಾವು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಭಾಗಿಯಾಗಿದ್ದೇವೆ ಎಂಬುದನ್ನು ಮರೆತುಬಿಡುತ್ತಿದ್ದರು. ಆದರೆ ನವ್ಯರು ಅಷ್ಟು ಪ್ರಾಮಾಣಿಕರಲ್ಲದಿರಬಹುದು. ಆದರೆ ಬಹುಮಟ್ಟಿಗೆ ಅವನು ಕ್ರಿಯಾಶೀಲ ಲೇಖಕ ಮತ್ತು ವಿಮರ್ಶಕನ ಸ್ಥಾನವನ್ನು ಪಡೆಯುತ್ತಾನೆ. ತಾನು ಭ್ರಷ್ಟ ಸಮಾಜದ ಒಂದು ಅಂಗ ಎಂಬ ಅರಿವು ಅವನಲ್ಲಿದೆ. ಈ ಅರಿವು ಅವನ ದೃಷ್ಟಿ ಧೋರಣೆಗೆ ಪ್ರಾಮಾಣಿಕೆಯ ಒತ್ತಾಸೆ ತಂದುಕೊಟ್ಟಿದೆ. ಬದುಕಿಗೆ ಅರ್ಥ ಹುಡುಕುವುದಕ್ಕೆ ಹೆಚ್ಚು ಒತ್ತು ಕೊಡುತ್ತಾನೆ. ಈ ಹುಡುಕಾಟದಲ್ಲೂ ಬದುಕಿನ ದ್ವಂದ್ವ ಮೌಲ್ಯಗಳು, ಶೂನ್ಯತೆ, ರೋಗಗ್ರಸ್ತ ಸಮಾಜ, ಪೂರ್ವಾಗ್ರಹ

[3] ಅದೇ.

[4] ಅಶೋಕ. ಟಿ.ಪಿ. (2011). *ಸಾಹಿತ್ಯ ಸಂಪರ್ಕ*. ಪು.ಸಂ. 33–34.

[5] ಅಮೂರ ಜೆ.ಎಸ್. (2020). ಅರ್ಥಲೋಕ. ಪು.ಸಂ. 11.

ಪೀಡಿತ ಮನಸ್ಸು, ನಿಷೇಧಗಳು, ಸಂಪ್ರದಾಯಗಳು ಅತೃಪ್ತಿ, ಆಕಾಂಕ್ಷೆ, ಈಡೇರದ ಪ್ರಣಯ, ವಿಕೃತ ಕಾಮ, ನಶಿಸುತ್ತಿರುವ ಧಾರ್ಮಿಕ ನಂಬಿಕೆ, ವೈಯಕ್ತಿಕ ತೀವ್ರತೆ, ಅಸ್ಥಿರತೆ, ಇತ್ಯಾದಿ ಹಲವರ ಮುಖಗಳು ಗೋಚರಿಸುತ್ತದೆ.

ಇಂತಹ ಸಮಾಜದ ವಾಸ್ತವಿಕ ಚಿತ್ರ ಕೊಡುವುದರ ಜೊತೆಗೆ ಒಂದು ವಿಚಾರಶೀಲ ಪ್ರಬುದ್ಧ ಮನಸ್ಸು ಲೋಕವನ್ನು ಹೇಗೆ ಕಾಣುತ್ತದೆ ಎಂಬುದನ್ನು ತೋರಿಸುವುದು ನವ್ಯ ಲೇಖಕನ ಕಾಳಜಿಯಾಗಿದೆ. ಈ ವೈಯಕ್ತಿಕತೆ ಅವನ ಸಾಹಿತ್ಯ ಸೃಷ್ಟಿಗೆ ಹೊಸ ಮೆರಗನ್ನು ತಂದು ಕೊಡುತ್ತದೆ ಎಂಬುದು ಮೌಲ್ಯಯುತ ಪ್ರಜ್ಞೆಯಾಗಿದೆ.

ಈ ಎಲ್ಲಾ ಹಿನ್ನೆಲೆಯನ್ನುಳ್ಳ ನವ್ಯ (ಸಾಹಿತ್ಯ) ಹುಟ್ಟಿಕೊಂಡ ಸಂದರ್ಭದಲ್ಲಿ ನವ್ಯಕಾದಂಬರಿಗಳ ಸ್ವರೂಪ ಇನ್ನು ಬದಲಾವಣೆಯಾಯಿತು. ಅವುಗಳಲ್ಲಿನ ತಾಂತ್ರಿಕ ಪರಿಣತಿ, ವೈವಿಧ್ಯಮಯ ಅನುಭವ, ಸಾಮಾಜಿಕ ದೃಷ್ಟಿಕೋನಗಳನ್ನು ಸ್ಪಷ್ಟವಾಗಿ ಗುರ್ತಿಸಬಹುದು. ಮಹಾಯುದ್ಧದ ನಂತರದ ಕಾಲದಲ್ಲಿ ಸಾಮಾಜಿಕ ಚಿತ್ರಣ, ನಗರದ ಮಧ್ಯಮ ವರ್ಗದ ಕೌಟುಂಬಿಕ ಸಮಸ್ಯೆ, ಆಧುನಿಕ ಬದುಕಿನ ಪ್ರಭಾವ, ನಿರುದ್ಯೋಗ ಸಮಸ್ಯೆ, ಅತಿವಾಸ್ತವಿಕತೆ, ಮನೋವೈಜ್ಞಾನಿಕ ದೃಷ್ಟಿಕೋನ, ಮಾನವನ ಸುಪ್ತ ಆಕಾಂಕ್ಷೆಗಳು, ಅವರ ಅಂತರಂಗ, ಬಹಿರಂಗಗಳ ಚಿತ್ರಣ ಮತ್ತು. ಮನುಷ್ಯನ ವಿಕೃತ ಬದುಕಿನ ಚಿತ್ರಣ – ಮುಂತಾದ ಅಂಶಗಳನ್ನು ನವ್ಯ ಕಾದಂಬರಿಗಳಲ್ಲೂ ಕಾಣಬಹುದಾಗಿದೆ. ಈ ಮೇಲಿನ ಅಂಶಗಳನ್ನು ಗಮನಿಸಿದಂತಹ ಸಂದರ್ಭದಲ್ಲಿ ನವ್ಯ ಕಾದಂಬರಿಗಳ ಮಹತ್ವ ಮತ್ತು ವೈಶಿಷ್ಟ್ಯತೆ ಅರ್ಥಪೂರ್ಣವಾಗಿರುವುದನ್ನು ಕಾಣಬಹುದಾಗಿದೆ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿಯೇ ಅತ್ಯಂತ ದೊಡ್ಡ ಹೆಸರು ಎಂದರೆ ಕುವೆಂಪುರವರು. ಇವರ ಕಾದಂಬರಿಗಳು ಬಹಳ ಮಹತ್ವಪೂರ್ಣತೆಯಿಂದ ಕೂಡಿರುವುದನ್ನು ಕಾಣಬಹುದು. ಮಹಾ ಕಾದಂಬರಿಗಳೆಂದೇ ಸಾಹಿತ್ಯದಲ್ಲಿ ಗುರ್ತಿಸಿಕೊಂಡಿದೆ. ಕಾನೂರು ಹೆಗ್ಗಡಿತಿ ಕಾದಂಬರಿಯಲ್ಲಿ ಬರುವ ಸೈಕಲ್ ಸವಾರನೊಬ್ಬ ಕಚ್ಚಾರಸ್ತೆಯಲ್ಲಿ ವೇಗವಾಗಿ ಬಂದು ಮುಗ್ಗರಿಸುವ ಸನ್ನಿವೇಶವನ್ನು ಕುವೆಂಪುರವರು ಆಕ್ರಮಣಶೀಲವಾದ ಚಂಪಲಮಾನ ನಾಗರಿಕ ಲೋಕವು ಮಲೆನಾಡಿಗೆ ಧಾಳಿಯಿಡುವ ಮೊದಲು ಮುನ್ನ ಅಟ್ಟಿದ ರಣಪಾರ ಎಂದು ವರ್ಣಿಸಿದ್ದಾರೆ. ಆಧುನಿಕತೆ ಎಂಬುದು ಯುದ್ಧದ ಪರಿಭಾಷೆಯಲ್ಲಿ ಚಿತ್ರಿಸಿರುವ ಈ ಹೊಸದಾದ ದೃಷ್ಟಿಕೋನವು ನಿಜವಾಗಿಯೂ ಐತಿಹಾಸಿಕ ಪ್ರಜ್ಞೆಯುಳ್ಳದ್ದಾಗಿದೆ ಎಂಬುದನ್ನು ಗುರ್ತಿಸಬಹುದಾಗಿದೆ.

ರೋಮ್ಯಾಂಟಿಕ್ ರಂಜಕ ಕಾದಂಬರಿಗಳ ಪರಿಣಾಮವಾಗಿ ಜಾತೀಯತೆಯ ಹಿಡಿತ ಸಡಿಲಗೊಂಡು, ಧಾರ್ಮಿಕ ಬಂಧನಗಳು ಶಿಥಿಲಗೊಂಡು, ಒಂದು ರೀತಿಯ ನಿಧರ್ಮೀ ಬುದ್ಧಿವಾದದತ್ತ ಮಧ್ಯಮ ವರ್ಗವು ನಡೆಯುವಂತಾಯಿತು.[6] ಜೊತೆಗೆ ಸಮಾನತೆ–ಸ್ವಾತಂತ್ರ್ಯದ ಮೌಲ್ಯಗಳು, ಆಧುನೀಕರಣವನ್ನು ವಿಕಸಿತಗೊಳಿಸುವ ಮೌಲ್ಯಗಳು ಬೆಳೆದು ಬಂದ ಬಗ್ಗೆ ಹೇಳಿದ್ದಾರೆ. ಹಣ, ಪ್ರತಿಷ್ಠೆಗಳಿಗಾಗಿ ಪೈಪೋಟಿ ಉಂಟಾದ ಬಗೆಯನ್ನು ಅ.ನ.ಕೃ. ಅವರ ಸಂಧ್ಯಾರಾಗ ಕಾದಂಬರಿಯಲ್ಲಿ ಕಾಣಬಹುದಾಗಿದೆ. ಅಲ್ಲದೆ ಕುವೆಂಪುರವರ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ' ಕಾದಂಬರಿಯಲ್ಲಿ ಬರುವ ಒಂದು ಇಡಿಯ ಸಾಮಾಜಿಕ ವ್ಯವಸ್ಥೆ ಅತ್ಯಂತ ಮೂರ್ತ ಸ್ವರೂಪದಲ್ಲಿ ಚಿತ್ರಿತವಾಗಿರುವುದನ್ನು ಕಾಣಬಹುದಾಗಿದೆ.

1950ರ ಹೊತ್ತಿಗೆ ಭಾರತದಲ್ಲಿ ವಿಜ್ಞಾನ–ತಂತ್ರಜ್ಞಾನ–ಜನಸಂಖ್ಯಾ ಸ್ಫೋಟ, ನಿರುದ್ಯೋಗ ಸಮಸ್ಯೆ, ಹೊಸ ನಾಗರಿಕತೆಯ ಪ್ರಭಾವದಿಂದಾಗಿ ಸಾಮಾಜಿಕ ವ್ಯವಸ್ಥೆ ಮುರಿದು ವ್ಯಕ್ತಿವಾದಕ್ಕೆ ಹೆಚ್ಚು ಬೆಲೆ ಬಂದಿತು. ವ್ಯಕ್ತಿಯ ಒಳಗಿನ ಲೋಕ ಹೆಚ್ಚು ಮುಖ್ಯವೆನಿಸಿತು. ಈ ವ್ಯಕ್ತಿನಿಷ್ಠ ಅನುಭವವು

[6] ಶಾಂತಿನಾಥ ದೇಸಾಯಿ. *ಪೂರ್ವೋಕ್ತ*. ಪು.ಸಂ. 23

ಹಲವಾರು ರೀತಿಯಲ್ಲಿ ಸಣ್ಣ ಕತೆಗಳಲ್ಲಿ ಹಾಗೂ ಕಾದಂಬರಿಗಳಲ್ಲಿ ಕೇಂದ್ರವಸ್ತುವಾಗಿ ಬಂದವು.

ಆಧುನಿಕತೆ ಪ್ರಥಮವಾಗಿ 'ಮುಕ್ತಿ' ಕಾದಂಬರಿಯಲ್ಲಿ ಮೈವೆತ್ತಿರುವುದು ಐತಿಹಾಸಿಕ ಸತ್ಯವಾಗಿದೆ. ಅನಂತರ ಗತಿಸ್ಥಿತಿ, ಶಿಕಾರಿ, ವಿಕ್ಷೇಪ, ಅವಸ್ಥೆ ಮುಂತಾದ ಕಾದಂಬರಿಗಳಲ್ಲಿ ಬಂದಿರುವುದನ್ನು ಗುರ್ತಿಸಬಹುದಾಗಿದೆ. ನವನಾಗರಿಕತೆಯ ಆಗಮನ, ಔದ್ಯೋಗಿಕರಣದ ಫಲವಾಗಿ ಬಂದಂಥ ಹೊಸ ವ್ಯವಸ್ಥೆ ಇವುಗಳೊಂದಿಗೆ ಮನುಷ್ಯ ತನ್ನ ವ್ಯಕ್ತಿತ್ವವನ್ನು ಬದಿಗಿಟ್ಟು ಹೊಸ ವ್ಯವಸ್ಥೆಯ ಅಂಗವಾಗುವುದನ್ನು ಹೇಳಲಾಗಿದೆ. ನವ್ಯ ಕಾದಂಬರಿಗಳಲ್ಲಿ ಬರುವ ನಾಯಕರ ವಿಕೃತ ಮನೋಭಾವದ ಮೂಲವನ್ನು ಹುಡುಕಿ ಅದು ವ್ಯಕ್ತಿಗೂ, ಸಮಾಜಕ್ಕೂ ಇರಬೇಕಾದ ಆರೋಗ್ಯಕರ ಸಂಬಂಧ ತಪ್ಪಿಹೋಗಿದೆ. ನವ್ಯ ಕಾದಂಬರಿಗಳ ನಂತರ ಬಂದ ಕಾದಂಬರಿಗಳು ವೈಯಕ್ತಿಕ ಅನಿಸಿಕೆಗಳಿಂದ ಸಮಾಜದತ್ತ, ರಾಜಕಾರಣದತ್ತ ಹೊರಳಿರುವುದನ್ನು ನವ್ಯ ಕಾದಂಬರಿಗಳಲ್ಲಿ ಕಾಣಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಅನಂತಮೂರ್ತಿ ಯು.ಆರ್. (1933). *ಭಾರತೀಪುರ.* ಅಕ್ಷರ ಪ್ರಕಾಶನ.
- ಅಶೋಕ. ಟಿ.ಪಿ. (2011). *ಸಾಹಿತ್ಯ ಸಂಪರ್ಕ.* ನಿರಂತರ ಪ್ರಕಾಶನ.
- ಆಮೂರ ಜೆ.ಎಸ್. (2020). *ಅರ್ಥಲೋಕ.* ಪ್ರಿಯದರ್ಶಿನಿ ಪ್ರಕಾಶನ.
- ಆಮೂರ ಜಿ.ಎಸ್. (1961). *ಕನ್ನಡ ಕಥನ ಸಾಹಿತ್ಯ: ಕಾದಂಬರಿ.* ಸಪ್ನ ಬುಕ್‌ಹೌಸ್.
- ಗಿರಿ. (1971). ಗತಿ,ಸ್ಥಿತಿ. *ಅಕ್ಷರ ಪ್ರಕಾಶನ.*
- ಗಿರಿ. (2014). *ಗತಿ ಸ್ಥಿತಿ ಮತ್ತೆಲ್ಲ.* ಆಕೃತಿ ಪುಸ್ತಕ.
- ಲಂಕೇಶ್ ಪಿ. (1973). *ಬಿರುಕು (ನಾಟಕ).* ಅಕ್ಷರ ಪ್ರಕಾಶನ.
- ಶಾಂತಿನಾಥ ದೇಸಾಯಿ. *ಕನ್ನಡ ಕಾದಂಬರಿ ನಡೆದು ಬಂದ ದಾರಿ.*
- ಶಾಂತಿನಾಥ ದೇಸಾಯಿ. (1933). *ಮುಕ್ತಿ.* ಮನೋಹರ **ಗ್ರಂಥಮಾಲಾ**.
- Tharakeshwar, V. (2016). Modernism in Kannada Literature. In The Routledge Encyclopedia of Modernism. : Taylor and Francis. doi:10.4324/0123456789-REM1869-1